ಆಯಾಮಗಳನ್ನೂ ಗ್ರಹಿಸಲು ಈ ಭಾಷೆ ಸಹಾಯಕವಾಗಿದೆ. ಅಂದರೆ ನಚಿಕೇತ–ಯಮನ ನಡುವಿನ ಸಂಭಾಷಣೆ, ಶಂಕರಾಚಾರ್ಯ ಮತ್ತು ಚಾಂಡಾಲನ ನಡುವಿನ ವಾಗ್ವಾದ, ಸಾವಿತ್ರಿ ಮತ್ತು ಯಮನ ನಡುವಿನ ಮಾತುಕತೆಯಲ್ಲಿ ಇರುವ ಧರ್ಮಸೂಕ್ಷ್ಮಗಳೇನು, ಆ ಕಥೆಯಲ್ಲಿ ಅಡಕವಾಗಿರುವ ವಿಪರ್ಯಾಸವೇನು ಎಂದು ಕುತೂಹಲ ಮೂಡಿದ್ದುಂಟು. ಅವೆಲ್ಲ ತರ್ಕಗಳು ಆಧುನಿಕವೂ ಆಗಿವೆ.

◆ **ಕಲಾವಿದರು ರಾಜಕೀಯ ನಿಲುವುಗಳನ್ನು ತಳೆದು ಮಾತನಾಡುವುದು ಕಷ್ಟವೇ?**

ನಾನು ರಾಜಕೀಯ ವಾತಾವರಣದಲ್ಲಿಯೇ ಬೆಳೆದಿದ್ದೇನೆ. ಗಾಂಧೀಜಿಯವರು ನಮ್ಮ ಮನೆಗೆ ಬಂದಿರುವುದನ್ನು ನೋಡಿರುವೆ. ಸರ್ದಾರ್ ಪಟೇಲ್ ಅವರು ನಮ್ಮ ಅಜ್ಜನಿಗೆ ಅಣ್ಣನ ಸಮಾನವಾಗಿದ್ದರು. ಅವರು ಚರ್ಚೆಗಳನ್ನು ನಡೆಸುವುದನ್ನು ನೋಡಿರುವೆ. ನನ್ನ ಅಜ್ಜ ಭಾರತದ ಮೊದಲ ಐವರು ರಾಜ್ಯಪಾಲರಲ್ಲಿ ಒಬ್ಬರಾಗಿದ್ದರು. ಸರ್ದಾರ್ ಪಟೇಲ್ ಅವರ ಮನೆಯಲ್ಲಿಯೇ ನಾವು ಉಳಿದುಕೊಂಡಿದ್ದೆವು. ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿ ಆಗಿದ್ದಾಗ ಅಜ್ಜ ಗವರ್ನರ್ ಆಗಿದ್ದರಲ್ಲ... ಅಟಲ್‌ಜಿ, ಅಡ್ವಾಣಿಜಿಯವರೊಂದಿಗೆ ಒಡನಾಟವಿತ್ತು. ಕಲಾವಿದರು ಸಮಾಜದಿಂದ, ಸಮಾಜವನ್ನು ನಡೆಸುವ ನೀತಿನಿರೂಪಿಸುವ ರಾಜಕೀಯದಿಂದ ಪ್ರತ್ಯೇಕವಾಗಿ ಜೀವಿಸಲು ಸಾಧ್ಯವಿಲ್ಲ. ಕಲಾವಿದರು ಸಮಾಜದ ಅಂಗವಾಗಿದ್ದಾರೆ. ಎಲ್ಲರಿಗೂ ತಿಳಿದಿರುವ ಕಥೆಯನ್ನೇ ಅವರು ಮತ್ತೆ ಮತ್ತೆ ಜನರ ಮುಂದೆ ಇಡುತ್ತ, ಜನರ ಅಂತರಂಗವನ್ನು ಶುದ್ಧಗೊಳಿಸಲು ಪ್ರಯತ್ನಿಸುತ್ತಾರೆ. ನಾನು ಪ್ರಸ್ತುತಪಡಿಸಿದ ದ್ರೌಪದಿಯ ಕಥೆಯ ಬಗ್ಗೆ ಚರ್ಚೆಗಳು ಶುರುವಾದಾಗ ನನಗೆ ಇದರ ಅರಿವಾಯಿತು. ಎಷ್ಟೋ ಸಂದರ್ಭಗಳಲ್ಲಿ ಕಥೆಯ ಗತಿ ಎಲ್ಲರಿಗೂ ತಿಳಿದಿರುತ್ತದೆ. ಆದರೆ ಒಡಿಸ್ಸಿ ಅಥವಾ ಇತರ ನೃತ್ಯ ಮಾಧ್ಯಮದ

